ಪಾಲಿಮಾರ್ ಇನ್ ರಬ್ಬರ್ ಟೆಕ್ನಾಲಜಿ ಮತ್ತು ಪಾಲಿಮಾರ್ ಇನ್ ಪ್ಲಾಸ್ಟಿಕ್ ಟೆಕ್ನಾಲಜಿ ವಿಭಾಗದಲ್ಲಿ ಖಾಲಿ ಇರುವ ಉಪನ್ಯಾಸಕರುಗಳು ಬ್ಯಾಕ್‌ಲಾಗ್ ಹುದ್ದೆಯಾಗಿದ್ದು, ಈಗಾಗಲೇ ಕೆ.ಪಿ.ಎಸ್.ಸಿ. 5ನೇ ಬಾರಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸಲ್ಲಿಸಲು ಜಾಹೀರಾತು ನೀಡಲಾಗಿರುತ್ತದೆ. ಆಯ್ಕೆ ಪಟ್ಟಿ ಬಂದ ಕೂಡಲೇ ನೇಮಕಾತಿ ಮಾಡಲಾಗುವುದು.

ದಿನಾಂಕ 10.11.98ರ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು.

ಮೊಳಕಾಲ್ಮೂರಿನಲ್ಲಿ ಅಗ್ನಿಶಾಮಕ ಕೇಂದ್ರ ಸ್ಥಾಪನೆ

564:(4079)

ಶ್ರೀ ಎನ್.ವೈ.ಗೋಪಾಲಕೃಷ್ಣ (ಮೊಳಕಾಲ್ಮೂರು): ಮಾನ್ಯ ಕಾರಾಗೃಹ, ಗೃಹರಕ್ಷಕದಳ, ಸೈನಿಕಕಲ್ಯಾಣ ಹಾಗೂ ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊಳಕಾಲ್ಮೂರಿನಲ್ಲಿ ಅಗ್ನಿಶಾಮಕ ಕೇಂದ್ರವನ್ನು ಸ್ಥಾಪಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿ.ಸೋಮಣ್ಣ (ಕಾರಾಗೃಹ, ಗೃಹರಕ್ಷಕದಳ ಸೈನಿಕಕಲ್ಯಾಣ ಮತ್ತು ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು):

ಅ) ಮೊಳಕಾಲ್ಮೂರಿನಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆ. ಈಗಾಗಲೇ ಸರ್ಕಾರದಿಂದ ಮಂಜೂರಾಗಿರುವ 49 ಅಗ್ನಿಶಾಮಕ ಠಾಣೆಗಳನ್ನು ತೆರೆಯಬೇಕಾಗಿದ್ದು ಅವುಗಳನ್ನು ಸ್ಥಾಪಿಸಿದ ನಂತರ ಮೊಳಕಾಲ್ಮೂರಿನಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯುವ ವಿಚಾರವನ್ನು ಪರಿಶೀಲಿಸಲಾಗುವುದು.

ತುಂಗಭದ್ರ ಎಡದಂಡೆ ಕಾಲುವೆಯ ದುರಸ್ತಿ ಕಾರ್ಯಗಳು

566:(4053)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರ ಎಡದಂಡೆ ಕಾಲುವೆಯು ಇದುವರೆವಿಗೂ ಸುಮಾರು 157 ಬಾರಿ ಒಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಹಿಂದೆ ಕಾಲುವೆಯು ಒಡೆದಾಗ 100 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ ಪೂರ್ಣ ಕಾಲುವೆಯನ್ನು ದುರಸ್ತಿ ಮಾಡಿಸುವುದಾಗಿ ಸರ್ಕಾರದವರು ಆಶ್ವಾಸನೆ ಕೊಟ್ಟಿರುವುದು ನಿಜವೇ? ಹಾಗಿದ್ದಲ್ಲಿ ಇದುವರೆವಿಗೆ ಸರ್ಕಾರ ಇದರ ಬಗ್ಗೆ ಕೈಗೊಂಡಿರುವ ಕ್ರಮವೇನು?

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು):

ಅ) ಹೌದು.

ಆ) ತುಂಗಭದ್ರಾ ಎಡದಂಡೆ ಕಾಲುವೆಯ ದುರಸ್ತಿಗಾಗಿ 2 ಅಯವ್ಯಯ ವರ್ಷಗಳಲ್ಲಿ 2 ಹಂತಗಳಲ್ಲಿ ಅಂದರೆ, ಡಿಸೆಂಬರ್-98 ರಿಂದ ಮಾರ್ಚ್-99 ರವರೆಗೆ ಹಾಗೂ ಏಪ್ರಿಲ್-99 ರಿಂದ ಜೂನ್-99ರವರೆಗೆ ತೆಗೆದುಕೊಳ್ಳುವ ಸಲುವಾಗಿ ಈಗಾಗಲೇ ಸರ್ಕಾರವು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ತುಂಗಭದ್ರಾ ಎಡದಂಡೆ ಕಾಲುವೆಯ (ವಿತರಣಾ ನಾಲೆಗಳು ಸೇರಿದಂತೆ) ದುರಸ್ತಿಗಾಗಿ ಸುಮಾರು 285 ಕೋಟಿಗಳು ತಗಲುವುದೆಂದು ಅಂದಾಜಿಸಲಾಗಿದ್ದು, ವಿವರವಾದ ಪರಿಶೀಲನೆಯಲ್ಲಿರುತ್ತದೆ.

ಬೆಂಗಳೂರು ನಗರದಲ್ಲಿ ಹಗುರ ಮೇಲು ರೈಲು ಯೋಜನೆ

567:(3965)

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರದಲ್ಲಿ ಹಗುರ ಮೇಲು ರೈಲು ಯೋಜನೆಯನ್ನು (ಇ.ಎಲ್.ಆರ್.ಟಿ.ಎಸ್) ಎಂದು ಪ್ರಕಟಿಸಲಾಯಿತು?

ಆ) ಈ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು?

ಇ) ಈ ಕಾರ್ಯದಲ್ಲಿ ಆಗಿರುವ ಪ್ರಗತಿಯೇನು?